**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 09 ಎಸ್‌ಸಿಹೆಚ್(1) 2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560001.
ದಿನಾಂಕ: 02-01-೨೦೨೦

**-:: ಸುತ್ತೋಲೆ ::-**

**ವಿಷಯ :** **2019-20ನೇ** ಸಾಲಿಗೆ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ :** ಇದೇ ಸಮ ಸಂಖ್ಯೆಯ ಸುತ್ತೋಲೆ ಪತ್ರದ ದಿನಾಂಕ: 02-11-2019 & 02-12-2019.

-0000000-

2019-20ನೇ ಸಾಲಿನಿಂದ ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ರೂ.10.00 ಲಕ್ಷ ಒಳಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗೆ ಹಾಗೂ ರಕ್ಷಣಾದಳದ ಸಿಬ್ಬಂದಿಯ ಮಕ್ಕಳಿಗೆ/ಆಶ್ರಿತರಿಗೆ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿರುವ ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶವನ್ನು ಅನುಷ್ಠಾನಗೊಳಿಸಿದ್ದು, ಸದರಿ ಪೋರ್ಟಲ್‌ನಲ್ಲಿ http://ssp.postmatric.karnataka.gov.in ಅರ್ಜಿ ಸಲ್ಲಿಸಲು ದಿನಾಂಕ: 01-11-2019 ರಿಂದ ಲೋಕಾರ್ಪಣೆ ಮಾಡಿ **ದಿನಾಂಕ: 15-01-2020**ರವರೆಗೆ ಅರ್ಜಿಗಳನ್ನು ಸಲ್ಲಿಸಲು ವಿಸ್ತರಿಸಲಾಗಿರುತ್ತದೆ. ಅದರಂತೆ ಸಂಸ್ಥೆಯ ಪ್ರಾಂಶುಪಾಲರು ಮತ್ತು ಇ-ದೃಢೀಕರಣ ಅಧಿಕಾರಿಗಳು ಈ ಕೆಳಗೆ ತಿಳಿಸಿರುವಂತೆ ಕಟ್ಟುನಿಟ್ಟಾಗಿ ಕ್ರಮ ವಹಿಸಬೇಕೆಂದು ತಿಳಿಸಿದೆ.

1. ಶುಲ್ಕ ಮರುಪಾವತಿ/ವಿದ್ಯಾರ್ಥಿವೇತನಕ್ಕೆ Post Matric State Scholarship Portalನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವ ಮೊದಲು ವಿದ್ಯಾರ್ಥಿಗಳು ತಾವು ಹೊಂದಿರುವ ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಲಿಂಕ್/ಜೋಡಣೆ (Seeding/Link Aadhaar to Bank Acccount) ಮಾಡಲು ಸಂಸ್ಥೆಯವರು ವಿದ್ಯಾರ್ಥಿಗಳಿಗೆ ತಿಳಿಸುವುದು.

2. ಆದ್ಯತೆಯ ಮೇರೆಗೆ ಸಂಸ್ಥೆಯವರು State Scholarship Portal ನಲ್ಲಿ ಅರ್ಹ ಇರುವ ಎಲ್ಲಾ ವಿದ್ಯಾರ್ಥಿಗಳು ತಮ್ಮ ಅಧಾರ್ ಸಂಖ್ಯೆ (Aadhaar Number) ಯಿಂದ ಮೊದಲು ನೋಂದಣಿ (Registration) ಮಾಡಲು ತಿಳಿಸುವುದು.

3. ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ದಿಂದ ರೂ.10.00 ಲಕ್ಷ ಮಿತಿಯೊಳಗೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಿ.ಇ.ಟಿ, ಕಾಮೆಡ್-ಕೆ, ಕೆಆರ್‌ಎಲ್‌ಎಂಪಿಸಿಎ & ಡೀಮ್ಡ್ ಯುನಿವರ್ಸಿಟಿ ಮೂಲಕ ಬಿ.ಇ/ಬಿ.ಟೆಕ್/ಬಿ.ಆರ್ಕ್ ಇಂಜಿನಿಯರಿಂಗ್ ಪದವಿ ಹಾಗೂ ಪಿ.ಜಿ-ಸಿ.ಇ.ಟಿ ಮುಖಾಂತರ ಆಯ್ಕೆಯಾಗಿ ಎಂ.ಇ/ಎಂ.ಟೆಕ್/ಎಂ.ಆರ್ಕ್ ಸ್ನಾತಕೋತ್ತರ ಪದವಿ ವ್ಯಾಸಂಗ ಮತ್ತು ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಡಿಪ್ಲೋಮಾ ಕೋರ್ಸು ವ್ಯಾಸಂಗ ಮಾಡುತ್ತಿರುವವರು ಶುಲ್ಕ ಮರುಪಾವತಿಗೆ ಅರ್ಹರಾಗಿರುತ್ತಾರೆ.

4. ರಕ್ಷಣಾದಳದಲ್ಲಿ (ಭೂ, ವಾಯು & ನೌಕದಳ) ಹಾಲಿ ಸೇವೆ ಸಲ್ಲಿಸುತ್ತಿರುವ ಯೋಧರು/ಸಿಬ್ಬಂದಿಯವರ ಮಕ್ಕಳಿಗೆ/ಆಶ್ರಿತರಿಗೆ ಸಿ.ಇ.ಟಿ, ಮುಖಾಂತರ ಆಯ್ಕೆಯಾಗಿ ಬಿ.ಇ/ಬಿ.ಟೆಕ್/ಬಿ.ಆರ್ಕ್ ಇಂಜಿನಿಯರಿಂಗ್ ಮತ್ತು ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮಾ ವ್ಯಾಸಂಗ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ.

5. ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡುತಿರುವ ಅರ್ಹ ವಿದ್ಯಾರ್ಥಿಗಳು State Scholarship Portal ನಲ್ಲಿ ಮೊದಲು ನೋಂದಣಿ (Registration) ಮಾಡಿಸಿ, ನಂತರ e-Attestation Portal (Students) ನಲ್ಲಿ Parent's Salary Slip (For SC/ST Students whose Annual Income Rs.2.50 lakhs above to Rs.10.00 lakhs below) ಯನ್ನು ಅಪ್‌ಲೋಡ್ (Upload) ಮಾಡುವುದು

6. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಿ.ಇ/ಬಿ.ಟೆಕ್/ಬಿ.ಆರ್ಕ್/ಎಂ.ಇ./ಎಂ.ಟೆಕ್/ಎಂ.ಆರ್ಕ್ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು State Scholarship Portal ನಲ್ಲಿ ಮೊದಲು ನೋಂದಣಿ (Registration) ಮಾಡಿಸಿ, ನಂತರ Students e-Attestation Portal ನಲ್ಲಿ ಅಗತ್ಯ ಇರುವ Bonafide Certificate, Marks Card, All Fee Paid Receipts, Parent's Salary Slip (For SC/ST Students whose Annual Income Rs.2.50 lakhs above to Rs.10.00 lakhs below) and Service Certificate (only for Defense Scholarship) ಗಳನ್ನು ಕಡ್ಡಾಯವಾಗಿ ಅಪ್‌ಲೋಡ್ (Upload) ಮಾಡುವುದು.

7. ವಿದ್ಯಾರ್ಥಿಗಳು **SSP Portal** ನಲ್ಲಿ ಇ-ದೃಢೀಕರಣಗಾಗಿ ಸಲ್ಲಿಸಿರುವ ಎಲ್ಲಾ ಪ್ರಮಾಣ ಪತ್ರಗಳನ್ನು ಆಯಾ ಸಂಸ್ಥೆಯ **(E-Attestation Officer)** ಇ-ದೃಢೀಕರಣ ಅಧಿಕಾರಿಗಳು ಆದೇ ದಿನವೇ ಕಡ್ಡಾಯವಾಗಿ ವಿಲೇಗೊಳಸಲು ಸೂಚಿಸಿದೆ.

8. ಯಾವುದೇ ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್‌ನಲ್ಲಿ ಇ-ದೃಢೀಕರಣಕ್ಕಾಗಿ ಸಲ್ಲಿಸಿದ ಎಲ್ಲಾ ದಾಖಲೆ/ಪ್ರಮಾಣ ಪತ್ರಗಳು ಮತ್ತು ಸಂಸ್ಥೆಗೆ ಪಾವತಿಸಿರುವ ವಿವಿಧ ಶುಲ್ಕಗಳ ರಸೀದಿಗಳನ್ನು, ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ, ಇ-ದೃಢೀಕರಣ ಮಾಡತಕ್ಕದ್ದು. ನಿಖರವಾದ ಕಾರಣವಿಲ್ಲದೇ ಯಾವುದಾದರೂ ಪ್ರಮಾಣ ಪತ್ರಗಳನ್ನು ಇ-ದೃಢೀಕರಣ ಮಾಡದೇ ತಿರಸ್ಕರಿಸಿದ ಬಗ್ಗೆ ವಿದ್ಯಾರ್ಥಿಗಳಿಂದ ಯಾವುದಾದರೂ ದೂರು ದಾಖಲಾದ್ದಲ್ಲಿ/ವಿದ್ಯಾರ್ಥಿಗಳು ಸಕಾಲದಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಆಯಾ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಇ-ದೃಢೀಕರಣ ಅಧಿಕಾರಿಗಳನ್ನೇ ನೇರವಾಗಿ ಹೊಣೆಗಾರರಾಗಿರುತ್ತಾರೆ ಹಾಗೂ ಅವರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ನಿರ್ದೇಶಕರು

*ಇವರಿಗೆ :-*

1. **ಪ್ರಾಂಶುಪಾಲರು**, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಇವರ ಮುಂದಿನ ಕ್ರಮಕ್ಕಾಗಿ.
2. **ಸಂಯೋಜನಾಧಿಕಾರಿಯವರು**, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).